## ವಿಷಯಾನುಕ್ರಮಣಿಕೆ


| | |
|---|---|
| ದೇವರ ಅಸ್ತಿತ್ವ — 1/8 | 2 |
| ಪ್ರವೇಶಿಕೆ | 2 |
| ನಾಸ್ತಿಕವಾದದ ಉಗಮ, ಮತ್ತು ಗ್ರಂಥಗಳು | 15 |
| ನಾಸ್ತಿಕ ಎಂಬ ಶಬ್ದದ ಅರ್ಥ | 17 |
| ನಾಸ್ತಿಕರ ವಾದಗಳು | 20 |




# ವಿಶ್ವನಂದಿನಿ ಲೇಖನಮಾಲೆ — 171

## ದೇವರ ಅಸ್ತಿತ್ವ — 1/8

### ಪ್ರವೇಶಿಕೆ

ದೇವರಿದ್ದಾನೆಯೇ ಇಲ್ಲವೇ ಎಂಬ ಪ್ರಶ್ನೆ ಯಾರನ್ನೂ ಕಾಡದೇ ಬಿಟ್ಟಿಲ್ಲ. ಆದರೆ ಅದಕ್ಕೆ ಸಮರ್ಥ ಉತ್ತರವನ್ನು ಪಡೆಯುವ ನಿಟ್ಟಿನಲ್ಲಿ ಸರಿಯಾದ ಪ್ರಯತ್ನ ಮಾಡುವವರು ಮಾತ್ರ ತುಂಬ ಕಡಿಮೆ. ಬೆರಳುಗಳಲ್ಲಿ ಎಣಿಸಿ ಮುಗಿಸಬಹುದಾದಷ್ಟು.

ಶ್ರೀಮದಾಚಾರ್ಯರ ಸರ್ವಮೂಲಗ್ರಂಥಗಳು ದೇವರ ಬಗ್ಗೆ ಹುಟ್ಟಿಬರಬಹುದಾದ ಎಲ್ಲ ಸಂಶಯಗಳಿಗೆ ಪ್ರಶ್ನೆಗಳಿಗೆ ಅಧಿಕೃತ ಮತ್ತು ಪರಿಶುದ್ಧ ಉತ್ತರಗಳನ್ನು ನೀಡಿವೆ. ಉಳಿದ ಯಾವ ದರ್ಶನದಲ್ಲಿಯೂ ದೊರಕದ ಮಾಹಿತಿ ನಮಗೆ ಅವುಗಳಲ್ಲಿ ದೊರಕುತ್ತದೆ.

ವಿಷ್ಣುತತ್ವನಿರ್ಣಯ ಮತ್ತು ಅನುವ್ಯಾಖ್ಯಾನಗಳಲ್ಲಿ ಬಂದಿರುವ ನಾಸ್ತಿಕವಾದದ ಖಂಡನೆಯಂತೂ ಇಡಿಯ ದಾರ್ಶನಿಕ ಪ್ರಪಂಚದಲ್ಲಿಯೇ ಅಪೂರ್ವವಾದದ್ದು.

ದೇವರ ಸ್ವರೂಪದಿಂದದಾರಂಭಿಸಿ ಅವನ ಸಾಕ್ಷಾತ್ಕಾರವನ್ನು ಪಡೆದು ಅವನನ್ನು ಶಾಶ್ವತವಾಗಿ ಪಡೆಯುವರೆಗಿನ ಪ್ರಕ್ರಿಯೆಗಳನ್ನು ತುಂಬ ವಿಸ್ತೃತವಾಗಿ ಆಚಾರ್ಯರು ವಿವರಿಸಿದ್ದಾರೆ.

ದೇವರ ಅಸ್ತಿತ್ವದ ಪುರಾವೆಯನ್ನು ಹುಡುಕುವದಕ್ಕಿಂತ ಮೊದಲಿಗೆ ಶ್ರೀಮದಾಚಾರ್ಯರ ಸಿದ್ಧಾಂತದ ಅತ್ಯಂತ ಮಹತ್ತ್ವದ ಅಂಶವನ್ನು ನಾವು ತಿಳಿಯಬೇಕು. ಭಗವಂತನ ಕುರಿತ ಚರ್ಚೆಗೆ ಶ್ರೀಕಾರ ಹಾಕುವ ಮುನ್ನ , ಆಚಾರ್ಯರು ನೀಡಿರುವ ಎಚ್ಚರಗಳ ಬಗ್ಗೆ ನಾವು ತಿಳಿದಿರಬೇಕು.

ದೇವರು ಎಂದರೆ ಕಣ್ಣಿಗೆ ಕಾಣದ, ಅರ್ಥಾತ್ ನಮ್ಮ ಯಾವ ಇಂದ್ರಿಯಗಳಿಗೂ ಗೋಚರವಾಗದ ಪದಾರ್ಥ. ಹೀಗಾಗಿ ಅವನ ಅಸ್ತಿತ್ವಕ್ಕೆ ಪ್ರತ್ಯಕ್ಷದ

ಪುರಾವೆ ದೊರಕಲು ಸಾಧ್ಯವಿಲ್ಲ. ಆದರೆ ಪ್ರತ್ಯಕ್ಷವೊಂದೆ ವಸ್ತುವಿನ ಅಸ್ತಿತ್ವವನ್ನು ನಿರ್ಧರಿಸುವ ಸಾಧನವಲ್ಲ. ಕಾಡಿನಲ್ಲಿ ನಡೆದು ಹೋಗುವಾಗ ಕಡಿದು ಜೋಡಿಸಿಟ್ಟ ಮರದ ರಾಶಿಯನ್ನು ಕಂಡರೆ, ಯಾರೋ ಮನುಷ್ಯರು ಇಲ್ಲಿಗೆ ಬಂದು ಹೋಗಿದ್ದಾರೆ ಎಂದು ನಿರ್ಧರಿಸಿ ಬಿಡುತ್ತೇವೆ. ನಾವೇನೂ ಅವರನ್ನು ಕಣ್ಣಾರೆ ಕಂಡಿರುವದಿಲ್ಲ. ಆದರೂ ಮನುಷ್ಯರಿಲ್ಲದೇ ಮರಗಳು ಹೀಗೆ ಕಡಿದು ಬೀಳುವದಿಲ್ಲ, ಮುರಿದು ಬಿದ್ದರೂ ಹೀಗೆ ಒಪ್ಪವಾಗಿರಲು ಸಾಧ್ಯವೇ ಇಲ್ಲ ಎಂದು ನಮಗೆ ನಿಶ್ಚಯವಿದೆ. ಹೀಗೆ ನಮ್ಮ ಅನುಭವದ ನೆಲೆಗಟ್ಟಿನಲ್ಲಿ ಕಣ್ಣಿಗೆ ಕಾಣುವ ಪದಾರ್ಥದಿಂದ ಕಣ್ಣಿಗೆ ಕಾಣಿಸದ ವಸ್ತುಗಳನ್ನು ನಿರ್ಧರಿಸಬಹುದು.

ಆದರೆ ನಮ್ಮ ಅನುಭವದ ಮಿತಿ ತುಂಬ ಸಣ್ಣದಿರುವದರಿಂದ ಈ ಪ್ರಪಂಚಕ್ಕೊಬ್ಬ ನಿರ್ಮಾತೃವಿದ್ದಾನೆ ಎಂದು ಸಾಮಾನ್ಯವಾಗಿ ನಿರ್ಧರಿಸಬಹುದದಷ್ಟೇ ಹೊರತು ಅವನು ದೇವರು ಎಂದು ನಿರ್ಧರಿಸಲು ಸಾಧ್ಯವಿಲ್ಲ. ಮನುಷ್ಯನೊಬ್ಬ ಇಲ್ಲಿ ಬಂದು ಮರ ಕಡಿದಿದ್ದಾನೆ ಎಂಬ ಜ್ಞಾನ ಬರುತ್ತದೆ ನಿಜ. ಆದರೆ ಇಂಥ ಬಣ್ಣದವನು ಇಂಥ

ಹೆಸರಿನವನು ಬಂದು ಕಡಿದಿದ್ದಾನೆ ಎಂಬ ಜ್ಞಾನ ಬರಲು ಸಾಧ್ಯವೇ ? ನಮ್ಮದೇ ತೋಟದಲ್ಲಿ ಯಾವುದೋ ಹೊಸ ಬದಲಾವಣೆ ಕಂಡಾಗ ನಮ್ಮ ಮಾಲಿ ಈ ಕೆಲಸ ಮಾಡಿದ್ದಾನೆ ಎಂದು ನಿರ್ಧರಿಸುತ್ತೇವೆ. ಕಾರಣ ಅವನನ್ನು ಬಿಟ್ಟರೆ ನಮ್ಮ ತೋಟಕ್ಕೆ ಯಾರೂ ಬರುವದಿಲ್ಲ ಎಂದು ಗೊತ್ತಿರುತ್ತದೆ. ಅಂದ ಮೇಲೆ ಮಾಲಿಯ ಪರಿಚಯ ಮೊದಲೇ ಇದ್ದುದರಿಂದ ಮಾಲಿ ಕೆಲಸ ಮಾಡಿದ್ದಾನೆ ಎಂಬ ಜ್ಞಾನ ನಮಗೆ ಬಂದಿತು. ಹಾಗೆಯೇ ಪ್ರಪಂಚವನ್ನು ನೋಡಿ ಇದನ್ನು ದೇವರು ಮಾಡಿದ್ದಾನೆ ಎಂಬ ಜ್ಞಾನ ನಮಗೆ ಬರಬೇಕಾದರೆ ಮೊದಲು ದೇವರ ಪರಿಚಯ ನಮಗಿರಬೇಕು.

ಆ ಪರಿಚಯ ಪ್ರತ್ಯಕ್ಷದಿಂದ ಉಂಟಾಗುತ್ತಿಲ್ಲ, ಯುಕ್ತಿಯಿಂದ ಸಾಧ್ಯವಿಲ್ಲ ಎಂದಾದ ಮೇಲೆ ಆಗಮಗಳಿಂದಲೇ ಅವನ ಪರಿಚಯವನ್ನು ಪಡೆಯಬೇಕು. ಆಗಮಗಳಿಂದ ತಿಳಿದ ಮಾತನ್ನು ಅನುಭವದ ಒರೆಗಲ್ಲಿಗೆ ಹಚ್ಚಿ, ಪ್ರಮಾಣಿಸಿ ನೋಡಿ ಇದು ಸತ್ಯ ಎಂದು ನಿರ್ಧರಿಸಬೇಕು.

ಹೀಗಾಗಿ ಕೇವಲ ನಮ್ಮ ಅನುಭವದ ನೆಲೆಗಟ್ಟಿನಲ್ಲಿ, ಅಂದರೆ ಯುಕ್ತಿಯ ಮುಖಾಂತರ ದೇವರ ಅಸ್ತಿತ್ವವನ್ನು ನಿರ್ಧರಿಸಲು ಸಾಧ್ಯವಿಲ್ಲ. ಆಗಮಗಳಿಗೇ ಮೊರೆ ಹೋಗಬೇಕು. ದೇವರನ್ನು ತಿಳಿಸುವ ಅಧಿಕೃತ ಮಾಧ್ಯಮ ಅದು ವೇದಗಳು. ಈ ಕಾರಣದಿಂದ ಮೊದಲು ಶ್ರೀಮದಾಚಾರ್ಯರು ವೇದಗಳ ಪ್ರಾಮಾಣ್ಯವನ್ನು ಸಮರ್ಥಿಸಿ ಆ ಬಳಿಕ ನಾವು ಭಗವಂತನ ಬಗ್ಗೆ ತಿಳಿಯಬೇಕಾದ್ದನ್ನೆಲ್ಲ ಅವುಗಳ ಮುಖಾಂತರವೇ ತಿಳಿಸಿ ಹೇಳಿದ್ದಾರೆ.

ಯುಕ್ತಿಯಿಂದ ನಾವು ಯಾವುದೇ ಅತೀಂದ್ರಿಯವಾದ ವಸ್ತುವನ್ನು ನಿರ್ಧರಿಸಲು ಸಾಧ್ಯವೇ ಇಲ್ಲ ಎಂದು ಆಚಾರ್ಯರು ಪ್ರಬಲವಾಗಿ ಪ್ರತಿಪಾದಿಸಿದ್ದಾರೆ. ಹೀಗಾಗಿ ನಾವಿಲ್ಲಿ ತಿಳಿಯ ಹೊರಟ ಯುಕ್ತಿಗಳು ಕೇವಲ ಯುಕ್ತಿಗಳಲ್ಲ, ಆಗಮದ, ಪ್ರತ್ಯಕ್ಷದ ಬೆಂಬಲವನ್ನು ಹೊತ್ತ ‘ಅನು’ಮಾನಗಳು.

ಮತ್ತು ಬರಿಯ ಯುಕ್ತಿಯಿಂದ ಭಗವಂತನ ಇರವನ್ನು ಸಾರ ಹೊರಟ ನೈಯಾಯಿಕರಿಗೆ ಆಚಾರ್ಯರು ಪ್ರಬಲವಾದ

ಸಮಸ್ಯೆಗಳನ್ನೊಡ್ಡಿದ್ದಾರೆ. ವೇದಗಳನ್ನು ಬಿಟ್ಟು ಭಗವಂತನ ಇರವನ್ನು ಸಾಧಿಸಲು ಸಾಧ್ಯವೇ ಇಲ್ಲ ಎಂದು ಅವರಿಗೆ ಮನವರಿಕೆ ಮಾಡಿಕೊಟ್ಟಿದ್ದಾರೆ.

ಶ್ರೀಮದಾಚಾರ್ಯರು ನೀಡಿರುವ ದೇವರ ಚಿತ್ರಣವೇ ಅತ್ಯಂತ ಅದ್ಭುತವಾದದ್ದು. ತೀಕ್ಷ್ಣ ಬುದ್ಧಿಯ ವಿದ್ವಾಂಸನಿಗೂ ಅದನ್ನು ಮನವರಿಕೆ ಮಾಡಿಕೊಳ್ಳುವದಿರಲಿ, ಕೇವಲ ಬುದ್ಧಿಗೆ ತಂದುಕೊಳ್ಳುವದಕ್ಕೂ ಕನಿಷ್ಠ ಹದಿನೈದು ವರ್ಷಗಳ ನಿರಂತರ ಅಧ್ಯಯನ ಬೇಕು.
ನಾನು ಈ ಪುಸ್ತಕದಲ್ಲಿ ಆಚಾರ್ಯರು ನೀಡಿರುವ ದೇವರ ಚಿತ್ರಣವನ್ನು ಯಥಾವತ್ ಕನ್ನಡದಲ್ಲಿ ಭಟ್ಟಿ ಇಳಿಸಿ ನೀಡಲು ಹೊರಟಿಲ್ಲ. ಅದು ಸಾಧ್ಯವೂ ಇಲ್ಲ. ಕಾರಣ ಆಚಾರ್ಯರ ವಾಕ್ಯಗಳನ್ನಾಗಲೀ ಅಥವಾ ಟೀಕಾಗ್ರಂಥಗಳ ವಾಕ್ಯಗಳನ್ನಾಗಲೀ ಸಂಸ್ಕೃತದಲ್ಲಿಯೇ ಅನುವಾದ ಮಾಡುವದು ಅಕ್ಷರಶಃ ಅಸಾಧ್ಯವಾದ ಮಾತು.

ಇನ್ನು ಪ್ರಾಂತೀಯ ಭಾಷೆಗಳಲ್ಲಿ ತಿಳಿಸಿ ಹೇಳುವದು ಕನಸಿನಲ್ಲಿಯೂ ಸಾಧ್ಯವಿಲ್ಲ. ಈ ಮಾತನ್ನು ನಾನೆಷ್ಟು ಬಾರಿ ಬರೆದರೂ ಸ್ವಯಂ

ನೀವು ಅನುಭವಕ್ಕೆ ತಂದುಕೊಳ್ಳದೇ ಅರ್ಥವಾಗುವದಿಲ್ಲ.  ಸಮಗ್ರ ಸಂಸ್ಕೃತವಾಙ್ಮಯವನ್ನು ಅಧ್ಯಯನ ಮಾಡಿ, ಚತುಃಶಾಸ್ತ್ರಗಳನ್ನು ಕೂಲಂಕಷವಾಗಿ ಅಭ್ಯಸಿಸಿ, ಪರಿಣತಪ್ರಜ್ಞರಾಗಿ  ಆಚಾರ್ಯರ ಸರ್ವಮೂಲಗ್ರಂಥಗಳ ಅಧ್ಯಯನಕ್ಕೆ ಕುಳಿತಾಗ ಅರ್ಥವಾಗಬಹುದು. ಅಷ್ಟು ವಿಸ್ತೃತ, ಗಂಭೀರ ಆಚಾರ್ಯರ ಕೃತಿಗಳು.

ನಾವು ಕನ್ನಡದಲ್ಲಿ ಸರ್ವಮೂಲಗಳ ವಿಷಯವನ್ನು ಬರೆಯುವದು, ಆಚಾರ್ಯರಿಂದ ಆಚಾರ್ಯರ ಶಾಸ್ತ್ರದಿಂದ, ಸನಾತನ ಪರಂಪರೆಯಿಂದ ಸಾಕಷ್ಟು ದೂರ ಹೋಗಿರುವ ಜನರನ್ನು ಮತ್ತೆ ಕರೆತರಲು.

ಅಮೃತದ ಸಮುದ್ರದ ದಡದಲ್ಲಿ ಮನೆಮಾಡಿಕೊಂಡು ಸುಖವಾಗಿ ಇದ್ದ ಜನಾಂಗದವರು  ಥಳಕು ಸುಖದ ಬೆನ್ನತ್ತಿ ಮರುಭೂಮಿಯ ಮಧ್ಯದಲ್ಲಿ ಬಂದು ನಿಂತು ಉಪ್ಪು ನೀರನ್ನೇ ಕುಡಿಯುತ್ತ ಬವಣೆಯಿಂದ ಬದುಕುತ್ತ ಇದನ್ನೇ ಬದುಕು ಎಂದುಕೊಂಡು ಬಿಟ್ಟಿದ್ದಾರೆ. ಸಿಹಿನೀರಿನ ಪರಿಚಯವೇ ಇಲ್ಲದ ಅವರಿಗೆ

ಅಮೃತ ಇದೆ, ಅದರ ಸಮುದ್ರವೂ ಇದೆ ಎಂತಾದರೂ ಹೇಗೆ ತಿಳಿಯಬೇಕು. ಅವರು ಮತ್ತೆ ಅಮೃತವಾರಿಧಿಯ ತಟಕ್ಕೆ ಬರಬೇಕು. ಆಚಾರ್ಯರ ದಿವ್ಯವಾಙ್ಮಯದ ಸವಿಯನ್ನು ಉಣಬೇಕು. ಆದರೆ ಸಮುದ್ರವನ್ನಂತೂ ಮರುಭೂಮಿಯ ಬಳಿ ತರಲು ಸಾಧ್ಯವಿಲ್ಲ. ಆದ್ದರಿಂದ ಅಲ್ಲಿಂದ ಒಂದು ಬೊಗಸೆ ನೀರನ್ನು ತಂದು ತೋರಿಸಿ, ಇಂಥ ನೀರಿನ ಸಮುದ್ರವೇ ಇದೆ, ಅದ ನೋಡ ಬನ್ನಿ, ಅಲ್ಲೇ ಇರ ಬನ್ನಿ ಎಂದು ಕರೆಯುವದಷ್ಟೆ ನಮ್ಮ ಕೆಲಸ.

ಮತ್ತು ದೇವರು ಎನ್ನುವದು ನಮ್ಮ ಹಿಂದು ಮುಂದಿರುವ ವಸ್ತುಗಳ ಹಾಗಿನ ಪದಾರ್ಥವಲ್ಲ. ಸುಮ್ಮನೆ ಕುತೂಹಲದಿಂದ ತಿಳಿಯುವಂತಹ ಪದಾರ್ಥವೂ ಅಲ್ಲ. ದೇವರು ಎನ್ನುವದು ಸಮಗ್ರ ವಸ್ತುಜಾತದ ನಿಯಾಮಕ ಶಕ್ತಿ. ಅದನ್ನು ಸರಿಯಾಗಿ ತಿಳಿಯುವದರಿಂದ ಶಾಶ್ವತ ಸುಖ ನಮ್ಮದಾಗುತ್ತದೆ. ತಪ್ಪಾಗಿ ತಿಳಿದರೆ ಕಡೆಯಿರದ ದುಃಖದ ಮಡುವಿನಲ್ಲಿ ಬೀಳುತ್ತೇವೆ. ತಿಳಿಯಲು ಪ್ರಯತ್ನವನ್ನೂ ಸಹ ಮಾಡದಿದ್ದರೆ ಹೀಗಿರುವ

ಹಾಗೆ ಹುಟ್ಟು ಸಾವುಗಳ ಸಂಕೋಲೆಯಲ್ಲಿ ಬಿದ್ದಿರುತ್ತೇವೆ.

ಟೀಕಾಕೃತ್ಪಾದರು ನ್ಯಾಯಸುಧೆಯಲ್ಲಿ ಈ ಮಾತನ್ನು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ.

**ಆಧ್ಯಾತ್ಮಿಕಾ ಹಿ ಭಾವಾ**
**ಮಿಥ್ಯಾ ಸಮ್ಯಗ್ ವಾ ವಿದಿತಾ**
**ಬಂಧಮೋಕ್ಷಯೋರಂತರಂಗತಾಮಶ್ನುವತೇ**

ಆ ಭಗವಂತನ ಇಚ್ಛೆಯೇ ಸಮಗ್ರ ಚೇತನಾಚೇತನಪ್ರಪಂಚದ ಸೃಷ್ಟಿಗೆ ಕಾರಣ.

ಅವನ ಕೇವಲ ಒಂದು ಅಪೇಕ್ಷೆ ಇಷ್ಟೆಲ್ಲದರ ವಿಲಯಕ್ಕೂ ನಿಮಿತ್ತ.

ಅವನ ಕರುಣೆಯ ಒಂದು ಕಟಾಕ್ಷ ಶಾಶ್ವತ ಸುಖವನ್ನು ಕರುಣಿಸುತ್ತದೆ.

ಅವನಿಗೆ ಮಾಡುವ ಅವಮಾನವೇ ಕೊನೆಯಿರದ ದುಃಖಕ್ಕೆ ಮೂಲ.

ಸಮಗ್ರ ಪ್ರಪಂಚ ಹುಟ್ಟಿ ಬರುವ ಮುಂಚೆಯೂ ಅವನಿದ್ದ. ನಾಶವಾದ ಮೇಲೂ ಅವನಿರುತ್ತಾನೆ. ಮಧ್ಯದಲ್ಲಿ ತಾನೇ ವಿಶ್ವಾಧ್ಯಕ್ಷನಾಗಿ ಎಲ್ಲರನ್ನೂ ಮುನ್ನಡೆಸುತ್ತಾನೆ.

ಈ ಪ್ರಪಂಚದಲ್ಲಿಯೂ ಅವನಿರದ ವಸ್ತುವಿಲ್ಲ. ಅವನ ನಿಯತಿಗೆ ಒಳಗಾಗದ ವಸ್ತುವಿಲ್ಲ. ಅವನನ್ನು ಮೀರಿ ನಡೆಯುವ ಚೇತನನಿಲ್ಲ. ಅವನನ್ನು ಪೀಡೆಗೊಳಪಡಿಸುವ ಶಕ್ತಿಯಿಲ್ಲ.

ದೇವತೆಗಳ ದೇವತ್ವ ಅವನಧೀನ. ಋಷಿಗಳ ತಪಸ್ಸು ಅವನು. ಚಕ್ರವರ್ತಿಗಳ ಪರಾಕ್ರಮ ಅವನಿಂದ ಬಂದದ್ದು. ಅಸುರರ ರಾಕ್ಷಸೀ ಶಕ್ತಿಯೂ ಅವನೂ ನೀಡಿದರೆ ಉಂಟು ಇಲ್ಲದಿದ್ದರೆ ಇಲ್ಲ.

ಹೀಗೆ ಎಲ್ಲವನ್ನೂ ಮೀರಿ ನಿಂತ, ಎಲ್ಲವನ್ನೂ ತನ್ನ ಅಂಕೆಯಲ್ಲಿಟ್ಟುಕೊಂಡ ಪೂರ್ಣಶಕ್ತಿ ಆ ಚೇತನ.

ಅವನಿಗೆ ಬದುಕಲು ನೀರಿನ ಆವಶ್ಯಕತೆಯಿಲ್ಲ. ಅವನ ಉಸಿರಾಟ ಗಾಳಿಯಿಂದ ನಡೆಯಬೇಕಾಗಿಲ್ಲ. ನಿಲ್ಲಲು ಭೂಮಿ ಬೇಕಾಗಿಲ್ಲ. ಕಾಣಲು ಸೂರ್ಯನ ಬೆಳಕು ಬೇಕಿಲ್ಲ. ಒಟ್ಟಾರೆ

ಯಾವುದಕ್ಕೂ ಯಾರನ್ನೂ ಆಶ್ರಯಿಸುವ ಬವಣೆ ಅವನಿಗಿಲ್ಲ.

ಹೊರತಾಗಿ ನೀರಿನ ರಸ ಅವನಿಂದ ಬಂದದ್ದು. ವಾಯುವಿಗೆ ಬದುಕು ನೀಡುವ ಪರಮಪ್ರಾಣ ಅವನು. ಭೂಮಿಯನ್ನು ಅಲ್ಲಾಡದಂತೆ ನಿಲ್ಲಿಸುವವನು ಅವನು. ಸೂರ್ಯನ ಬೆಳಕು ಅವನ ಬೆಳಕಿನ ತುಣುಕು. ಹೀಗೆ ತನ್ನ ಸುಖಕ್ಕಾಗಿ ಯಾರನ್ನೂ ಆಶ್ರಯಿಸದೆ ಎಲ್ಲರನ್ನೂ ತನ್ನ ಆಶ್ರಯದಲ್ಲಿಟ್ಟುಕೊಂಡು ಅವರ ಗುಣ ಸಾಮರ್ಥ್ಯಗಳನ್ನು ನಿಯಮಿಸುವ ಪರಿಪೂರ್ಣವಸ್ತು ಆ ಭಗವಂತ.

ದೇವರ ಬಗೆಗೆ ಇದೊಂದು ತುಂಬ ಸ್ಥೂಲವಾದ ವಿವರಣೆ. ಆದರೆ ಒಬ್ಬ ಚೇತನ ಇಷ್ಟು ಪರಿಪೂರ್ಣನಾಗಿದ್ದಾಗ, ಸರ್ವಶಕ್ತನಾಗಿದ್ದಾಗ ಅವನನ್ನು ನಾವು ತಿಳಿಯುವದರಿಂದ ಅಥವಾ ತಿಳಿಯದೇ ಇರುವದರಿಂದ ಅವನಿಗೆ ಆಗಬೇಕಾದದ್ದಾದರೂ ಏನು ? ಮತ್ತು ಇಂಥವನ ಬಗ್ಗೆ ತಿಳಿಯಬೇಕಾದರೆ ಅದೆಂಥ ನಿಯಮಗಳಿರುವದಿಲ್ಲ ?

ಒಬ್ಬ ಪ್ರಭಾವಶಾಲೀ ಅಧಿಕಾರದಲ್ಲಿರುವ ಸಾಮಾನ್ಯ ಮನುಷ್ಯನನ್ನು  ತಿಳಿಯುವದೇ, ಅವನನ್ನು ತಲುಪುವುದೇ ಅತ್ಯಂತ ಅಸಾಧ್ಯವಾದ ಕೆಲಸ. ಅಂಥಹುದರಲ್ಲಿ ಎಂದೆಂದಿಗೂ ಕೊನೆಯಾಗದ ಅಧಿಕಾರವುಳ್ಳ, ಯಾರಿಂದಲೂ ಬೇಡಿ ಪಡೆಯದ ಸಾಮರ್ಥ್ಯದ ಆ ಭಗವಂತನನ್ನು ತಿಳಿಯುವದು, ತಲುಪುವದು ಸಾಮಾನ್ಯದ ಮಾತೇ?

ಅವನನ್ನು ತಿಳಿಯುವದಕ್ಕೆ ಒಂದು ಸ್ಪಷ್ಟವಾದ ಮಾರ್ಗವಿದೆ, ವಿಸ್ತೃತವಾದ ಪ್ರಕ್ರಿಯೆಯಿದೆ. ಆ ಮಾರ್ಗದಲ್ಲಿ ನಡೆಯುತ್ತ ಆ ನಿಯಮಗಳನ್ನು ಅನುಸರಿಸುತ್ತ ಅವನನ್ನು ತಿಳಿಯಲು ಪಡೆಯಲು ಮಹಾಪ್ರಯತ್ನ ಮಾಡಿದಾಗ ಮಾತ್ರ ಅವನನ್ನು ತಿಳಿಯಲು ಪಡೆಯಲು ಸಾಧ್ಯ.

ಹೀಗಾಗಿ ಯಾರಿಗೆ ಶಾಶ್ವತ ಸುಖ ಬೇಕಾಗಿದೆ ಅವರು ಭಗವಂತನನ್ನು ತಿಳಿಯಲು ಪ್ರಯತ್ನಿಸಬೇಕು. ಮತ್ತು ಆ ಮಾರ್ಗಕ್ಕೆ ಸುಲಭವಾಗಿ ಪ್ರವೇಶ ದೊರಕುವದಿಲ್ಲ. ನಮ್ಮ

ಐಹಿಕ ಸುಖ, ಕೋತಿ ಮನಸ್ಸು, ಮೂರ್ಖ ವಿಚಾರಗಳು, ತಪ್ಪು ನಡವಳಿಕೆಗಳು ಇಂಥ ಎಲ್ಲವನ್ನೂ ಕಡಿದು ಬಲಿ ನೀಡಿದರಷ್ಟೇ ತೆರೆದುಕೊಳ್ಳುವ ಸಾಧನಮಾರ್ಗ.

ಹೀಗಾಗಿ ಹಣ ಹೆಣ್ಣುಗಳ ಮಧ್ಯದಲ್ಲಿ ಬಿದ್ದಿರುವ ಮನುಷ್ಯನಿಗೆ ಇದರಲ್ಲಿ ಅಭಿರುಚಿಯೂ ಹುಟ್ಟುವದಿಲ್ಲ, ಅರ್ಥವೂ ಆಗುವದಿಲ್ಲ. ಅವನಿಗೆ ಹೇಳಿ ಯಾವ ಪ್ರಯೋಜನವೂ ಇಲ್ಲ. ಆದರೂ ಮಹಾಪ್ರಯತ್ನ ಮಾಡುವ ಸಾತ್ವಿಕ ಅಪೇಕ್ಷೆ ಉಳ್ಳ ಮನುಷ್ಯನಿಗೆ, ಈಗಾಗಲೇ ತನಗಿರುವ ಆಸ್ತಿಕತೆಯನ್ನು ದೃಢ ಮಾಡಿಕೊಳ್ಳುವದಕ್ಕೆ ಇದೊಂದು ಸಹಾಯಕ ಉಪಕರಣವಷ್ಟೇ. ಹೊರತು, ನಾನೇ ಎಲ್ಲಾ, ನನ್ನಿಂದಲೇ ಎಲ್ಲಾ ಎನ್ನುತ್ತ,  ಮತ್ತೊಬ್ಬರನ್ನು ಹೀನಾಯವಾಗಿ ನಿಂದಿಸುತ್ತ ದೇವರಿದ್ದರೆ ನನ್ನ ಮುಂದೆ ಬಂದು ನಿಲ್ಲಲಿ, ಒಪ್ಪುತ್ತೇನೆ ಎನ್ನುವ ಮೂರ್ಖ ಜನರಿಗಾಗಿ ಈ ಪ್ರಯತ್ನವಲ್ಲ.

## ನಾಸ್ತಿಕವಾದದ ಉಗಮ, ಮತ್ತು ಗ್ರಂಥಗಳು

ಯಾವ ವಾದವನ್ನೂ ಯಾರೂ ಹೊಸದಾಗಿ ಹುಟ್ಟುಹಾಕಲು ಸಾಧ್ಯವಿಲ್ಲ. ಆಲೋಚನೆಗಳು ಪ್ರತಿಯೊಂದು ಕಾಲಕ್ಕೂ ಇರುತ್ತವೆ. ಆದರೆ ಕೆಲವು ಸಂದರ್ಭಗಳಲ್ಲಿ ಆ ನಿಟ್ಟಿನಲ್ಲಿ ಬಹಳ ಕೃಷಿ ಮಾಡಿದ ಜನ ಗ್ರಂಥಗಳನ್ನು ಬರೆದು, ಅದರ ಮೇಲಿನ ಆಕ್ಷೇಪಗಳನ್ನು ಪರಿಹರಿಸಿ, ಆ ಆಲೋಚನೆಗೊಂದು ಸೈದ್ಧಾಂತಿಕ ರೂಪವನ್ನು ಕೊಡುತ್ತಾರೆ. ಆಗ ಆ ಆಲೋಚನೆಗಳು ವಾದಗಳಾಗಿ, ಶಾಸ್ತ್ರಗಳಾಗಿ ರೂಪುಗೊಳ್ಳುತ್ತವೆ. ದೇವರಿದ್ದಾನೆಯೇ, ಇಲ್ಲವೇ ಎಂಬ ಪ್ರಶ್ನೆ ಇಂದು ನೆನ್ನೆಯದಲ್ಲ. ವೇದಗಳಲ್ಲಿ, ಉಪನಿಷತ್ತುಗಳಲ್ಲಿ, ಇದರ ಬಗ್ಗೆ ಚರ್ಚೆಯಾಗಿದೆ. ಮುಂದೆ ರಚನೆಯಾದ ಪುರಾಣಗಳಲ್ಲಿ, ಮಹಾಭಾರತದಲ್ಲಿ ಆಸ್ತಿಕ-ನಾಸ್ತಿಕವಾದಗಳ ವಿಸ್ತೃತ ನಿರೂಪಣೆಯಿದೆ. ಆಸ್ತಿಕ-ನಾಸ್ತಿಕರ ಮಧ್ಯದಲ್ಲಿ ನಡೆದ ಸ್ವಾರಸ್ಯಕರ ಘಟನೆಗಳ ದಾಖಲೆಯಿದೆ. ಪ್ರತಿಯೊಂದು ದರ್ಶನದಲ್ಲಿಯೂ ನಾಸ್ತಿಕವಾದಗಳ ಖಂಡನೆ ನಮಗೆ ದೊರೆಯುತ್ತದೆ. ಕಾಲಕಾಲಕ್ಕೆ ನಾಸ್ತಿಕರೂ ತಮ್ಮ ವಾದವೈಖರಿಯನ್ನು ಬದಲಿಸಿಕೊಳ್ಳುತ್ತ

ನಾಸ್ತಿಕತೆಯನ್ನು ಬಿತ್ತಲು ಪ್ರಯತ್ನಿಸುತ್ತಲೇ ಇದ್ದಾರೆ.

ಇವತ್ತಿನ ದಿವಸ ನಾಸ್ತಿಕರದ್ದು ಎನ್ನುವ ಯಾವ ಸಾಹಿತ್ಯವೂ ದೊರಕುವದಿಲ್ಲ. ಗ್ರಂಥರೂಪದಲ್ಲಿ ಅವರ ಸಾಹಿತ್ಯ ರಚನೆಯಾದದ್ದೂ ತುಂಬ ಕಡಿಮೆಯೇ. ಆದರೆ ಸಣ್ಣದಾದರೂ ಅವರದೂ ಒಂದು ವಾಙ್ಮಯವಿತ್ತು ಎಂದು ಇತಿಹಾಸದಿಂದ ನಮಗೆ ತಿಳಿದುಬರುತ್ತದೆ. ಅನೇಕ ದಾರ್ಶನಿಕರು ನಾಸ್ತಿಕತೆಯ ಖಂಡನೆಗಾಗಿ ತಮ್ಮ ಗ್ರಂಥಗಳಲ್ಲಿ ಮಾಡಿದ ಉಲ್ಲೇಖದಿಂದ ನಾಸ್ತಿಕದರ್ಶನದ ಸೂತ್ರ-ಭಾಷ್ಯ-ಟೀಕಾಗ್ರಂಥಗಳ ರಚನೆಯಾಗಿದ್ದವು ಎಂದು ಸ್ಪಷ್ಟವಾಗಿ ತಿಳಿಯುತ್ತದೆ.

ದೇವತೆಗಳನ್ನು ಸೋಲಿಸಿ ಅಧಿಕಾರದಲ್ಲಿ ಮೆರೆಯುತ್ತಿದ್ದ ಅಸುರರನ್ನು ಅಧಿಕಾರದಿಂದ ತಪ್ಪಿಸಲು ದೇವಗುರು ಬೃಹಸ್ಪತ್ಯಾಚಾರ್ಯರು ರಚನೆ ಮಾಡಿದ ಶಾಸ್ತ್ರವಿದು.

ಅವರು ರಚಿಸಿದ ಸೂತ್ರಗಳ ಉಲ್ಲೇಖ ಪ್ರತಿಯೊಂದು ದರ್ಶನದ ಎಲ್ಲ ಗ್ರಂಥಗಳಲ್ಲಿ

ನಮಗೆ ದೊರೆಯುತ್ತದೆ. ಭಗವಾನ್ ಪತಂಜಲಿ ತನ್ನ ಮಹಾಭಾಷ್ಯದಲ್ಲಿ ನಾಸ್ತಿಕಸಿದ್ಧಾಂತದ ಟೀಕೆಯೊಂದನ್ನು ಹೆಸರಿಟ್ಟು ಉಲ್ಲೇಖಿಸಿದ್ದಾನೆ —

**“ವರ್ಣಿಕಾ ಭಾಗುರೀ ಲೋಕಾಯತಸ್ಯ”.**

ಸರ್ವದರ್ಶನಸಂಗ್ರಹದಲ್ಲಿ ಪ್ರಾಯಃ ಭಾಗುರಿಯದೇ ಎನ್ನಬಹುದಾದ ಅನೇಕ ಶ್ಲೋಕಗಳನ್ನು ಸಾಯಣಮಾಧವರು ಉದಾಹರಿಸಿದ್ದಾರೆ. ಇಷ್ಟನ್ನು ಬಿಟ್ಟರೆ ಆ ಗ್ರಂಥಗಳು ಪೂರ್ಣರೂಪದಲ್ಲಿ ನಮಗೆ ಉಪಲಬ್ಧವಿಲ್ಲ.

## ನಾಸ್ತಿಕ ಎಂಬ ಶಬ್ದದ ಅರ್ಥ

ನಾಸ್ತಿಕರಿಗೆ ಚಾರ್ವಾಕ, ಲೋಕಾಯತಿಕ ಎಂಬ ಹೆಸರುಗಳೂ ಇವೆ. ನಾಸ್ತಿಕ ಎಂಬ ಶಬ್ದಕ್ಕೆ ದೇವರನ್ನು ಪರಲೋಕವನ್ನು ಒಟ್ಟಾರೆ ಅತೀಂದ್ರಿಯಪದಾರ್ಥಗಳನ್ನು ಒಪ್ಪದವನು ಎಂದರ್ಥ. ಮತ್ತು ವೇದಗಳನ್ನು ಒಪ್ಪದ ಅವೈದಿಕ

ವಾದಿಗಳನ್ನು ನಾಸ್ತಿಕರು ಎಂದೇ ಕರೆಯಲಾಗುತ್ತದೆ.[1]

**ಚಾರ್ವಾಕ ಎಂದರೆ ಬೃಹಸ್ಪತಿಯ ಶಿಷ್ಯರು ಎಂದರ್ಥ. ಚಾರ್ವೀ ಎಂದರೆ ಸರಿಯಾದ ಬುದ್ಧಿಯುಳ್ಳ ಗುರು. ಅವನ ಶಿಷ್ಯರು ಚಾರ್ವಾಕರು.**

---

[1] ಇವತ್ತಿನ ದಿವಸ ತಮ್ಮನ್ನು ತಾವು ನಾಸ್ತಿಕರು ಎಂದು ಕರೆದುಕೊಳ್ಳುವ ಜನ ಸ್ವಲ್ಪ ಸಂಕುಚಿತ ಅರ್ಥದಲ್ಲಿ ಅದನ್ನು ಬಳಸುತ್ತಾರೆ. ದೇವರು, ಧರ್ಮ ಇವನ್ನು ಒಪ್ಪದವರು ಎಂಬ ಅರ್ಥದಲ್ಲಿ. ಆದರೆ ಅವರಿಗೆ ಧರ್ಮ ಎಂಬ ಶಬ್ದದ ಅರ್ಥ ತಿಳಿದಿಲ್ಲ. ಧರ್ಮ ಎಂದರೆ ಕೇವಲ ಸಂಧ್ಯಾವಂದನೆ ಶ್ರಾದ್ಧ ಮುಂತಾದ ಧಾರ್ಮಿಕ ಆಚರಣೆಗಳಲ್ಲ. ಧರ್ಮ ಎಂದರೆ ನೀತಿ, ಬದುಕಿನ, ಸಮಾಜದ ನೀತಿ. ಧಾರ್ಮಿಕತೆ ನೈತಿಕತೆ ಇವೆರಡೂ ಸಮಾನಾರ್ಥಕವಾದ ಪದಗಳು. ನಮ್ಮ ಪ್ರಾಚೀನರ ಧರ್ಮಶಾಸ್ತ್ರ ಎಂದರೆ ಅದು ಬೆಳಗಿನಿಂದ ಸಂಜೆಯವರೆಗೆ ಶುದ್ಧವಾಗಿ ಬದುಕುವ  ರೀತಿಯನ್ನು ಕಲಿಸುವ ಶಾಸ. ಹೆಂಡತಿ ಮಕ್ಕಳಿಂದ ಆರಂಭಿಸಿ ಸಮಾಜದ ಪ್ರತಿಯೊಬ್ಬ ವ್ಯಕ್ತಿಯ ಜತೆಯಲ್ಲಿ ವ್ಯವಹರಿಸಬೇಕಾದರೆ ಅನುಸರಿಸಬೇಕಾದ ನಿಯಮಗಳನ್ನು ತಿಳಿಸುವ  ಶಾಸ. ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯಗಳನ್ನು ತಿಳಿಸಿ ಹೇಳುವ ಸಂವಿಧಾನ. ಚಾರ್ವಾಕರು ಇವನ್ನೂ ಒಪ್ಪುವದಿಲ್ಲ. ಆದರೆ ತಮ್ಮನ್ನು ತಾವು ನಾಸ್ತಿಕರು ಎಂದು ಉದ್ಘೋಷಿಸಿಕೊಳ್ಳುವ ಈಗಿನ ಕಾಲದ ನಾಸ್ತಿಕರಿಗೆ ನಾಸ್ತಿಕತೆ ಅಂದರೇನು ಸಹಿತ ತಿಳಿದಿಲ್ಲ. ನಾಸ್ತಿಕ ಎಂದರೆ ಕೇವಲ ಭೋಗಲೋಲುಪ. ನಾಸ್ತಿಕ ಎಂದರೆ ಸಮಾಜದ ಸಂವಿಧಾನಗಳನ್ನು ಮುರಿಯುವವ. ಆದರೆ ಸಮಾಜಕ್ಕೊಂದು, ಬದುಕಿಗೊಂದು ನೀತಿಸಂಹಿತೆ ಬೇಕು ಎನ್ನುವ ವ್ಯಕ್ತಿ, ದೇವರಿಲ್ಲ ಎಂದು ಹೇಳಿದ ಮಾತ್ರಕ್ಕೆ ಅವನನ್ನು ಶಾಸ್ತ್ರೀಯ ದೃಷ್ಟಿಯಿಂದ ನಾಸ್ತಿಕ ಎಂದು ಕರೆಯಲು ಸಾಧ್ಯವಿಲ್ಲ.

ಚಾರುವಾಕ್, ಚಾಲಾಕಿಯ ಮಾತಿನವ ಎಂಬುದರ ಅಪಭ್ರಂಶ ರೂಪ ಚಾರ್ವಾಕ ಎಂದು ಕೆಲವು ವಿದ್ವಾಂಸರು ಬರೆದದ್ದುಂಟು. ಆದರೆ ಅದು ಶಾಸ್ತ್ರೀಯ ಆಧಾರವಿಲ್ಲದ ಬರಿಯ ಕಲ್ಪನೆಯಷ್ಟೆ.

ಸಾಮಾನ್ಯವಾಗಿ ಜಗತ್ತಿನಲ್ಲಿ ಬಹುಪಾಲು ಜನ ಹಣದ ಸಂಪಾದನೆ, ಅದರ ಭೋಗಗಳಲ್ಲಿ ಆಸಕ್ತರಾದವರೇ. ಮನುಷ್ಯನಲ್ಲಿ ಆಸ್ತಿಕತೆ ಸ್ವಲ್ಪವಾದರೂ ಇದ್ದರೆ ತನ್ನ ಬಳಿ ಇರುವ ಸಂಪತ್ತನ್ನು ಹತ್ತು ಜನರ ಜತೆಯಲ್ಲಿ ಹಂಚಿ ಅನುಭವಿಸುತ್ತಾನೆ. ಆದರೆ ಸ್ವಾರ್ಥಿ ಜನರು ತುಂಬಿರುವ ಈ ಲೋಕದಲ್ಲಿ ನಾಸ್ತಿಕತೆ ತುಂಬಿದೆ ಎಂದೇ ಅರ್ಥ. ಹೀಗಾಗಿ ಲೋಕದಲ್ಲೆಲ್ಲಾ ತಮ್ಮ ಸಿದ್ಧಾಂತ ಸಹಜವಾಗಿ ಹರಡಿದೆ, ಅದರ ಪ್ರಚಾರಕ್ಕಾಗಿ ವಿಶೇಷ ಪ್ರಯತ್ನವನ್ನು ಮಾಡಬೇಕಾಗಿಲ್ಲ,ಎನ್ನುವ ಹೆಮ್ಮೆಯಿಂದ ಚಾರ್ವಾಕರು ತಮ್ಮನ್ನು ತಾವು ಲೋಕಾಯತಿಕರು, ತಮ್ಮ ಶಾಸ್ತ್ರವನ್ನು ಲೋಕಾಯತ ಶಾಸ್ತ್ರ ಎಂದು ಕರೆದುಕೊಳ್ಳುತ್ತಾರೆ.

## ನಾಸ್ತಿಕರ ವಾದಗಳು

ಎಲ್ಲ ದರ್ಶನಗಳಿಗೆ ಹೋಲಿಸಿದರೆ ನಾಸ್ತಿಕರದ್ದು ತುಂಬ ಸಣ್ಣದಾದ ಸಿದ್ಧಾಂತ. ವಿಷಯ ಪ್ರಯೋಜನಗಳೇ ಇಲ್ಲದ ಆ ಸಿದ್ಧಾಂತಕ್ಕೆ ವಿಸ್ತೃತಿಯಾದರೂ ಹೇಗೆ ಉಂಟಾಗಬೇಕು ? **ಉಳಿದ ದರ್ಶನದವರು ಚಾರ್ವಾಕರನ್ನು ವೈತಂಡಿಕರು ಎಂದು ಅಪಹಾಸದಿಂದ ಕರೆಯುತ್ತಾರೆ**. ಕಾರಣ, ನಾಸ್ತಿಕರಿಗೆ ಉಳಿದವರ ವಾದಗಳನ್ನು ಖಂಡನೆ ಮಾಡುವದರಲ್ಲಿಯೇ ಪಾಂಡಿತ್ಯ. ತಮ್ಮ ವಾದಗಳನ್ನು ಸಮರ್ಥಿಸಿಕೊಳ್ಳುವದರಲ್ಲಿ ಆಸಕ್ತಿ ಸಹಿತ ತೋರಿಸುವದಿಲ್ಲ. ಅವರು ತಮ್ಮ ಯಾವ ಮಾತಿಗೂ ಪುರಾವೆಯನ್ನು ಒದಗಿಸಿಲ್ಲ. **ದೇವರಿದ್ದಾನೆಯೇ ಎಂದು ಪ್ರಶ್ನೆ ಮಾಡುವ ಅವರು ದೇವರಿಲ್ಲ ಎನ್ನುವದನ್ನು ನಿರೂಪಿಸಿಲ್ಲ.** ಹೀಗಾಗಿ ಅವರ ಯಾವ ವಾದಕ್ಕೂ ಒಂದು ಸೈದ್ಧಾಂತಿಕ ನೆಲೆಗಟ್ಟು ಇಲ್ಲ. ಆದ್ದರಿಂದ ಅವರ ಮಾತುಗಳನ್ನು ಕೇವಲ "ಹೇಳಿಕೆ" (statement) ಎನ್ನಬಹುದೇ ಹೊರತು ಸಿದ್ಧಾಂತಗಳು ಎಂದು ಕರೆಯಲು

ಸಾಧ್ಯವಾಗುವದಿಲ್ಲ. ಒಟ್ಟಾರೆ ಅವರ ನಿಲುವುಗಳು ಹೀಗಿವೆ.

ಇಂದ್ರಿಯಗಳಿಗೆ ಗೋಚರವಾದದ್ದು ಮಾತ್ರ ಸತ್ಯ. ಅತೀಂದ್ರಿಯವಾದ ಪದಾರ್ಥವೇ ಜಗತ್ತಿನಲ್ಲಿಲ್ಲ. ಆಕಾಶ ಕಣ್ಣಿಗೆ ಕಾಣುವದಿಲ್ಲ. ಹೀಗಾಗಿ ಪಂಚಭೂತಗಳು ಎನ್ನುವ ಮಾತು ತಪ್ಪು. ಭೂಮಿ, ನೀರು, ಬೆಂಕಿ, ಗಾಳಿ ಎಂಬ ಭೂತಚತುಷ್ಟಯ ಮಾತ್ರ ಸತ್ಯ.

ಈ ಭೂತಚತುಷ್ಟಯವು ವಿಶಿಷ್ಟಕ್ರಮದಲ್ಲಿ ಸಂಯೋಗವನ್ನು ಹೊಂದಿದಾಗ ದೇಹ ನಿರ್ಮಾಣವಾಗುತ್ತದೆ. ಆ ದೇಹವೇ ಜೀವ. ಹೊರತು ಜೀವ ಎನ್ನುವದು ದೇಹದಿಂದ ಭಿನ್ನವಾದ ಪ್ರತ್ಯೇಕ ಪದಾರ್ಥವಲ್ಲ.

ಎಲೆ, ಅಡಿಕೆ, ಸುಣ್ಣಗಳಲ್ಲಿ ಇರದ ಕೆಂಪುಬಣ್ಣ ಅವುಗಳ ಮಿಶ್ರಣದಿಂದ ಉಂಟಾದ ತಾಂಬೂಲದಲ್ಲಿ ಬರುವಂತೆ ಭೂಮಿ ನೀರು ಬೆಂಕಿ ಗಾಳಿಗಳಲ್ಲಿಲ್ಲದ ಚೈತನ್ಯ ದೇಹದಲ್ಲಿ ಬರುತ್ತದೆ.

ಕಾಮವೇ ಪ್ರಧಾನ ಪುರುಷಾರ್ಥ. ಅದಕ್ಕೆ ಸಹಾಯಕವಾದ್ದರಿಂದ ಅರ್ಥವೂ ಪುರುಷಾರ್ಥ. ಧರ್ಮ ಮೋಕ್ಷಗಳೆಲ್ಲ ಪುರಾಣೀಕರ ಬೊಗಳೆಗಳು.

ಸುಖಗಳಲ್ಲಿ ಸರ್ವೋತ್ತಮವಾದ ಸುಖ ಸ್ತ್ರೀಸುಖ. ಆ ಸುಖ ಪೂರ್ಣವಲ್ಲ, ಶಾಶ್ವತವಲ್ಲ. ಬೆವರಿನಿಂದ, ಶ್ರಮದಿಂದ ಆ ಸುಖದಲ್ಲಿ ದುಃಖದ ಅಂಶವಿದೆ ಎಂದು ತಿಳಿದು ಅದನ್ನು ಜರಿಯುವ ಪುರಾಣೀಕರು ಮೂರ್ಖರು.

ಕಳೆ ಬೆಳೆಯುತ್ತದೆ, ಪ್ರಾಣಿಗಳ ಹಾವಳಿಯಿದೆ ಎನ್ನುವ ಕಾರಣಕ್ಕೆ ಕೃಷಿ ಮಾಡದೇ ಕೂರಲಾದೀತೇ ? ಇಲ್ಲದ ಮೋಕ್ಷಸುಖಕ್ಕಾಗಿ ಇರುವ ಸುಖವನ್ನು ಹಾಳುಗೆಡವಿಕೊಳ್ಳುವವನ್ನು ಬುದ್ಧಿವಂತ ಎನ್ನಲಾದೀತೇ ?

ಹೀಗೆ ಇಲ್ಲಿ ಅನುಭವಿಸುವ ಸುಖವೇ ಸ್ವರ್ಗ. ದುಃಖವೇ ನರಕ. ನಮಗೆ ಹಣ ನೀಡುವವರೇ (ರಾಜರು, ಅಧಿಕಾರಿಗಳು..) ದೇವರು. ಮರಣವೇ ಮೋಕ್ಷ. ಸತ್ತ ನಂತರ ಬದುಕಿಲ್ಲ. ಅದಕ್ಕಾಗಿ ಬದುಕಿರುವವರೆಗೆ ಸುಖವಾಗಿ

ಬದುಕಬೇಕು. ಸಾಲ ಮಾಡಿಯೊ, ಮತ್ತೊಬ್ಬರನ್ನು ಹೊಡೆದೊ, ಬಡಿದೊ, ಮೋಸಮಾಡಿಯೊ ಒಟ್ಟಾರೆ ಸುಖವನ್ನನುಭವಿಸಿಬಿಡಬೇಕು.

ದೇವರಿದ್ದಿದ್ದರೆ, ಧರ್ಮವಿದ್ದಿದ್ದರೆ, ಪರಲೋಕವಿದ್ದಿದ್ದರೆ ಕಣ್ಣಿಗೆ ಕಾಣಿಸಬೇಕಾಗಿತ್ತು. ಅವು ಕಣ್ಣಿಗೆ ಕಾಣಿಸುತ್ತಿಲ್ಲ , ಆದ್ದರಿಂದ ಅವು ಇಲ್ಲ. ಅವುಗಳ ಭಯದಿಂದ ನಾವು ಸುಖವಂಚಿತರಾಗಬಾರದು.

ವೇದ ಪುರಾಣಗಳೆಲ್ಲ ದುಡಿದು ತಿನ್ನುವ ಯೋಗ್ಯತೆ ಇಲ್ಲದ ಜನ ತಮ್ಮ ಹೊಟ್ಟೆ ಹೊರೆಯಲು ನಿರ್ಮಾಣ ಮಾಡಿಕೊಂಡಿರುವ ಕಟ್ಟುಕಥೆಗಳು.

ಇಷ್ಟೇ ನಾಸ್ತಿಕರ ಸಿದ್ಧಾಂತ ಸಾಗರ.

ಇನ್ನು ಉಳಿದಂತೆ ಅವರು ಮಾತು ಚರ್ಚೆಗಳೆಲ್ಲ ಧರ್ಮಗಳ ಸುತ್ತ, ಧಾರ್ಮಿಕ ವ್ಯಕ್ತಿಗಳ ಸುತ್ತ, ಅವರ ತಪ್ಪುಗಳ ಸುತ್ತ ಗಿರಕಿ ಹೊಡೆಯುತ್ತವೆ.

## ತಮ್ಮ ಮಾತನ್ನೆಲ್ಲ ಅವರು ಧಾರ್ಮಿಕ ವ್ಯಕ್ತಿಗಳನ್ನು ಹೀಗಳೆಯುವದಕ್ಕೇ ಉಪಯೋಗಿಸುತ್ತಾರೆ.[2]

## — ವಿಷ್ಣುದಾಸ ನಾಗೇಂದ್ರಾಚಾರ್ಯ

**ನಾಸ್ತಿಕವಾದದ ವಿಮರ್ಶೆ ಮುಂದಿನ ಭಾಗದಲ್ಲಿ...**

---

[2] ನೀವು ಯಾವುದೇ ನಾಸ್ತಿಕರ ಪುಸ್ತಕಗಳನ್ನು ತೆರೆದು ನೋಡಿ. ಒಂದು ಸೈದ್ಧಾಂತಿಕ ಚರ್ಚೆ ಸಹಿತ ಅಲ್ಲಿರುವದಿಲ್ಲ. ಕೇವಲ ಧಾರ್ಮಿಕ ಆಚರಣೆಗಳನ್ನು, ಧಾರ್ಮಿಕ ವ್ಯಕ್ತಿಗಳನ್ನು ಖಂಡಿಸಿರುತ್ತಾರೆ. ಒಬ್ಬ ವ್ಯಕ್ತಿ ನಿಜವಾಗಿ ಧಾರ್ಮಿಕನಾಗಿದ್ದರೆ ತಪ್ಪು ಮಾಡುವದಿಲ್ಲ, ತಪ್ಪು ಮಾಡುತ್ತಿದ್ದರೆ ಧಾರ್ಮಿಕನೇ ಅಲ್ಲ ಪ್ರಾಥಮಿಕ ಜ್ಞಾನ ಸಹಿತ ಈ ನಾಸ್ತಿಕರಿಗಿರುವದಿಲ್ಲ. ಕಳೆದ ಶತಮಾನದಲ್ಲಿ ಅತಿ ದೊಡ್ಡ ನಾಸ್ತಿಕ ಎಂದು ಗುರುತಿಸಿಕೊಂಡ ಬಟ್ರೆಂಡ್ ರಸೆಲ್ ಸಹಿತ ಇದಕ್ಕೆ ಹೊರತಾಗಲಿಲ್ಲ. ದೇವರಿಲ್ಲ ಎಂದು ನಿನಗೆ ನಿರೂಪಿಸಲು ಸಾಧ್ಯವೇ ಎಂಬ ಪಾದ್ರಿಯೊಬ್ಬನ ಪ್ರಶ್ನೆಗೆ "ಸಾಧ್ಯವಿಲ್ಲ" ಎಂದು ದಿಟ್ಟತನದ ಸೋಗು ಹಾಕಿ ನಾಚಿಕೆಯಿಲ್ಲದೆ ಉತ್ತರ ನೀಡಿರುವ ಆತ ತನ್ನ ಪುಸ್ತಕಗಳಲ್ಲಿ ಕ್ರಿಸ್ತನನ್ನು , ಕ್ರಿಶ್ಚಿಯಾನಿಟಿಯನ್ನು, ತೀವ್ರವಾಗಿ ಖಂಡಿಸಿದ್ದಾನೆ. ಮುಖ್ಯವಾಗಿ ಅವನು ಕ್ರೈಸ್ತಪಂಥವನ್ನು ನಿರಾಕರಿಸಿದ್ದರೂ, ದೇವರು, ಧರ್ಮಗಳ ಬಗ್ಗೆ ಸಾಮಾನ್ಯ ಜನರನ್ನು ದಾರಿ ತಪ್ಪಿಸುವ ಹಾಗೆ ಮಾತನಾಡಿರುವದರಿಂದ ಅವನ ಲೇಖನಗಳ ವಿಮರ್ಶೆ ಅತ್ಯಗತ್ಯ. ಅದರ ಬರವಣಿಗೆಯ ಕೆಲಸ ಮಧ್ಯಮ ಹಂತದಲ್ಲಿದೆ. ಪ್ರಾಯಃ ಮುಂದಿನ ವರ್ಷ ಇದೇ ಸಮಯಕ್ಕೆ ಅದು ನಿಮ್ಮ ಕೈಸೇರುತ್ತದೆ.

# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, “Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491